

ಚಿತ್ರ: ಶಶಿಧರ್ ಹಳೇಮನಿ

# ಮಾಯಾ ಕನ್ನಡಿ

■ ಟಿ.ಆರ್. ಉಷಾರಾಣಿ

ಬಹಳ ಹಿಂದೆ ಚಂದ್ರಾಪುರ ಎಂಬ ರಾಜ್ಯವನ್ನು ಚಂದ್ರಸೇನ ಎಂಬ ಅರಸನು ಆಳುತ್ತಿದ್ದನು. ಅವನಿಗೆ ಒಬ್ಬಳೇ ಮಗಳು ಚಂದ್ರಪ್ರಭೆ. ಹೆಸರಿಗೆ ತಕ್ಕಂತೆ ಪ್ರಭೆಯಿಂದ ಕಂಗೊಳಿಸುತ್ತಿದ್ದಳು. ಗಂಡು ಮಕ್ಕಳಿಲ್ಲದ ಚಂದ್ರಸೇನ ಅವಳನ್ನು ಗಂಡು ಮಗುವಿನಂತೆಯೇ ಸಾಕಿದ್ದನು. ಚಂದ್ರಪ್ರಭೆಗೆ ಹದಿನೆಂಟು ತುಂಬುತ್ತಿದ್ದಂತೆ ರೂಪ ಲಾವಣ್ಯಗಳ ರಾಶಿಯಾಗಿದ್ದ ಅವಳನ್ನು ವರಿಸಲು ಅನೇಕ ರಾಜರು ಮುಂದೆ ಬಂದರು. ಆದರೆ ಅವಳ ವಿದ್ವತ್ತು, ರೂಪಿಗೆ ಸರಿಸಾಟಿಯಾದ ಯಾವೊಬ್ಬ ವರನೂ ಚಂದ್ರಸೇನನಿಗೆ ಒಪ್ಪಿಗೆಯಾಗಲಿಲ್ಲ. ಶೌರ್ಯ, ಸಂಪತ್ತಿನಿಂದ ಚಂದ್ರಪ್ರಭೆಗೆ ಅಹಂಕಾರವೂ ತಲೆಗೇರಿತ್ತು. ಮಗಳಿಗೆ ತಕ್ಕ ವರನನ್ನು ಹೇಗೆ ಹುಡುಕುವುದು ಎನ್ನುವುದೇ ಚಂದ್ರಸೇನನಿಗೆ ಕಾಡುತ್ತಿದ್ದ ಸಮಸ್ಯೆ.

ಇನ್ನ್ಯಾರು ದಿಕ್ಕು ನನ್ನ ಮಗಳಿಗೆ ಎಂದು ರಾಜ ಚಿಂತೆಯಲ್ಲಿ ಬಿದ್ದನು. ಚಂದ್ರಪ್ರಭೆಗೆ ವಿವಾಹ ಯೋಗವಿರುವುದಾಗಿ ಎಲ್ಲ ಜ್ಯೋತಿಷಿಗಳೂ ಶುಭ ನುಡಿದರು. ಕುಲಪುರೋಹಿತರು ಸ್ವಯಂವರವನ್ನು ಏರ್ಪಡಿಸುವಂತೆ ನುಡಿದರು. ಚಂದ್ರಸೇನನಿಗೆ ಹೊಸ ಯೋಚನೆ ಶುರುವಾಯಿತು. ಚಂದ್ರಪ್ರಭೆ ಮದುವೆ ಮಾಡಿಕೊಂಡು ಹೊರಟು ಹೋದರೆ ತನ್ನ ರಾಜ್ಯದ ಗತಿಯೇನು? ಹಾಗಾಗಿ ಚಂದ್ರಪ್ರಭೆಗೆ ರಾಜ್ಯಾಭಿಷೇಕ ಮಾಡುವುದಾಗಿ ತನ್ನ ಆಸೆಯನ್ನು ಕುಲ ಪುರೋಹಿತರ ಮುಂದಿಟ್ಟ. ಆದರೆ ಕನ್ಯಾದಾನ ಮಾಡದೇ ತಂದೆಗೆ ಮುಕ್ತಿಯಿಲ್ಲ ಎಂದು ಕುಲ ಪುರೋಹಿತರು ಅವನ ಮಾತಿಗೆ ಸಮ್ಮತಿ ಸೂಚಿಸಲಿಲ್ಲ. ತಂದೆಯ ಹೆಸರಿನಲ್ಲಿ ಚಂದ್ರಪ್ರಭೆಯೇ ರಾಜ್ಯಭಾರ ಮಾಡುತ್ತಿದ್ದಳು. ವಿಧಿ ಇಲ್ಲದೆ ಕುಲಪುರೋಹಿತರು ಹೇಳಿದಂತೆ ಚಂದ್ರಸೇನ ಸ್ವಯಂವರವನ್ನು ಏರ್ಪಡಿಸಿದ. ಅನೇಕ ರಾಜರು ದೂರದ ಪ್ರದೇಶಗಳಿಂದ ವಿವಾಹಾಕಾಂಕ್ಷಿಗಳಾಗಿ ಚಂದ್ರಾಪುರಕ್ಕೆ ಆಗಮಿಸಿದರು. ಬಂದವರೆಲ್ಲರಿಗೂ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಅವರಿಗಾಗಿ ವಿಶೇಷ ವಾಸಸ್ಥಾನಗಳನ್ನು ಕಾದಿರಿಸಲಾಗಿತ್ತು. ಚಂದ್ರಪ್ರಭೆಯನ್ನು ವರಿಸುವ ಭಾಗ್ಯ ಯಾರಿಗಿದೆಯೋ ಎಂದು ಎಲ್ಲರೂ ಒಳಗಿಂದೊಳಗೇ ಚಿಂತಿಸುತ್ತಿದ್ದರು. ತಮ್ಮ ಪರಾಕ್ರಮವನ್ನು ತೋರಿಸುವ ಯಾವ ಅವಕಾಶವನ್ನೂ ಕಳೆದುಕೊಳ್ಳಲೂ ಅವರು ತಯಾರಿರಲಿಲ್ಲ. ಸ್ವಯಂವರಕ್ಕೆ ಬಂದವರು ಚಂದ್ರಪ್ರಭೆ ನೀಡಲು ತಮ್ಮ ದೇಶದ ವಿವಿಧ ವಸ್ತುಗಳನ್ನೂ ತಂದಿದ್ದರು. ಹಿಂದಿನ ದಿನ ರಾತ್ರಿ ಅತಿಥಿಗಳಿಗಾಗಿ ಔತಣ ಕೂಟವನ್ನು ಏರ್ಪಡಿಸಲಾಗಿತ್ತು. ಮುತ್ತು, ರತ್ನ ವಜ್ರಗಳಿಂದ ಸಾಲಂಕೃತಳಾಗಿ ಚಂದ್ರಪ್ರಭೆ ಸಭೆಗೆ ಬಂದಾಗ ಅವಳ ರೂಪ ಲಾವಣ್ಯ ನೋಡಿ, ಅವಳು ತಮಗೇ ಒಲಿಯಲಿ ಎಂದು ತಮ್ಮ ಮೆಚ್ಚಿನ ದೇವರಿಗೆ ಕೈ ಮುಗಿದರು. ಔತಣ ಕೂಟವಂತೂ ಸುಗ್ರಾಸ ಭೋಜನದಿಂದ ತುಂಬಿತ್ತು.

ಎಲ್ಲರೂ ತಾವು ತಂದಿದ್ದ ಉಡುಗೊರೆಗಳನ್ನು ನಾ ಮುಂದು ತಾ ಮುಂದು ಎಂದು ಮುಗಿ ಬಿದ್ದು ಚಂದ್ರಪ್ರಭೆಗೆ ನೀಡಿ ಕೃತಾರ್ಥರಾದರು. ಆದರೆ ಅವರಲ್ಲಿ ಒಬ್ಬ ಯುವಕ ಮಾತ್ರ ಠೀವಿಯಿಂದ ಕುಳಿತಿದ್ದವನು ತನ್ನ ಆಸನದಿಂದ ಮೇಲೇಳಲಿಲ್ಲ. ಅತ್ಯಂತ ಸುರದ್ರೂಪಿ ಯುವಕ ಕಟ್ಟು ಮಸ್ತಾದ ದೇಹ. ಚಂದ್ರಪ್ರಭೆಯ ದೃಷ್ಟಿ ಅವನ ಕಡೆ ತಿರುಗಿತು. ಎಲ್ಲರೂ ತನ್ನ ಕೃಪೆಗಾಗಿ ಹಾತೊರೆಯುತ್ತಿರುವಾಗ ಅವನು ಮಾತ್ರ ಯಾವ ಉಡುಗೊರೆಯನ್ನು ನೀಡದೆ ತನ್ನ ಸ್ಥಾನದಲ್ಲಿ ಗಂಭೀರ ವದನನಾಗಿ ಕುಳಿತಿರುವುದನ್ನು ನೋಡಿ ಆಶ್ಚರ್ಯವೂ ಆಯಿತು ಕೋಪವೂ ಬಂದಿತು. ಚಂದ್ರಪ್ರಭೆ ತಾನೇ ಮುಂದುವರೆದು 'ತಮ್ಮ ಪರಿಚಯ...?'

'ನಾನು ವಿದರ್ಭ ದೇಶದ ರಾಜಕುಮಾರ. ನನ್ನ ಹೆಸರು ವಿದ್ಯಾಧರ. ನನ್ನ ತಂದೆ ವೀರಸೇನ ಮಹಾರಾಜರು. ಅವರು ಪ್ರಸಿದ್ಧ ಜ್ಯೋತಿಷಿಗಳೂ ಹೌದು. ಸುತ್ತ ಮುತ್ತಲ ಪ್ರಾಂತ್ಯದಲ್ಲಿ ಅವರಷ್ಟು ನಿಖರವಾಗಿ ಜೋತಿಷ್ಯವನ್ನು ಹೇಳುವವರು ವಿರಳ. ನನ್ನ ಬಗ್ಗೆ ಮತ್ತೇನಾದರೂ ವಿವರ ಬೇಕಿತ್ತೆ...' ಎಂದು ಚಂದ್ರಪ್ರಭೆಯನ್ನು ನೋಡಿದನು. ಯುವಕನ ಮಾತು ಕೇಳಿ ಚಂದ್ರಸೇನ ಮಹಾರಾಜನಿಗೆ ಈ ಯುವಕನಲ್ಲಿ ವಿಶೇಷವಿದೆ ಎಂದೆನಿಸಿತು.

'ನನಗೇನು ತಂದಿದ್ದೀರಿ...? ಎಂದು ಚಂದ್ರಪ್ರಭೆ ಸವಾಲೆಸೆದಳು. 'ನಾನು ತಮ್ಮನ್ನು ಪಡೆಯಲು ಬಂದಿದ್ದೇನೆ ಕೊಡಲು ಅಲ್ಲ. ಆದರೂ ಒಂದು ಚಿಕ್ಕ ಉಡುಗೊರೆ ತಂದಿದ್ದೇನೆ ಆದರೆ ಒಂದು ಷರತ್ತಿದೆ. ಇದು ಮಾಯಾ ಕನ್ನಡಿ. ಇದನ್ನು ನೀವು ಮಾತ್ರ ನೋಡಿದರೆ ಭವಿಷ್ಯ ತಿಳಿಯುತ್ತದೆ ಎಲ್ಲರೂ ನೋಡುವಂತಿಲ್ಲ' ಎಂದು ತನ್ನ ಸೊಂಟದಲ್ಲಿ ಅಡಗಿಸಿಟ್ಟಿದ್ದ ಒಂದು ಚಿಕ್ಕ ಕನ್ನಡಿಯನ್ನು ಕೊಟ್ಟನು.